ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಭೂಮಿ ಮತ್ತು 11ಇ ನಕ್ಷೆ ಯೋಜನೆ ಅನುಷ್ಠಾನದ ಸಮಯದಲ್ಲಿ ಸಾರ್ವಜನಿಕರಿಂದ ಕೆಲವು ದೂರುಗಳು ಸ್ವೀಕೃತವಾಗಿರುತ್ತವೆ. ಸಾರ್ವಜನಿಕರ ದೂರುಗಳನ್ನು ಆಧರಿಸಿ ಅವರಿಗೆ ಆಗುತ್ತಿರುವ ಈ ಸಮಸ್ಯೆಗಳನ್ನು ಬಗೆಹರಿಸಲು ಸ್ಥಳೀಯ ಶಾಸಕರು ಮತ್ತು ಜಿಲ್ಲಾಧಿಕಾರಿ ಯವರ ಜೊತೆ ಒಂದು ಸಭೆ ಕರೆದು ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ನೀರಾವರಿ ಅನುದಾನ ಕುರಿತು

43 (209) ಶ್ರೀ ಯು. ಟಿ. ಖಾದರ್ (ಮಂಗಳೂರು) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಕಳೆದ 2 ವರ್ಷಗಳಿಂದ ಸಣ್ಣ ನೀರಾವರಿ ಇಲಾಖೆಯಿಂದ ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ಕ್ಷೇತ್ರವಾರು ಬಿಡುಗಡೆ ಮಾಡಿರುವ ಅನುದಾನದ ವಿವರ ಒದಗಿಸುವುದು);

ಆ) ಬಿಡುಗಡೆ ಮಾಡಲಾದ ಅನುದಾನದಲ್ಲಿ ಎಷ್ಟು ಹಣವನ್ನು ಹಾಗೂ ಉಳಿದ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ವಿವರ ಕೆಳಗಿನಂತಿದೆ.

1) 2007–08 – ರೂ. 660.46 ಲಕ್ಷ
2) 2008–09 – ರೂ.672.80 ಲಕ್ಷ
3) 2009–10 – ರೂ.225.85 ಲಕ್ಷ

ಕ್ಷೇತ್ರವಾರು ಅನುದಾನ ಮತ್ತು ಕಾಮಗಾರಿಗಳಿಗೆ ಮಾಡಿದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಯು.ಟಿ.ಖಾದರ್ ರವರ ಚುಕ್ಕೆ ಗುರುತಿಲ್ಲದ ಪ್ರ.ಸಂ.209ಕ್ಕೆ ಅನುಬಂಧ

ವಿಧಾನ ಸಭಾ ಕ್ಷೇತ್ರವಾರು 2007-08 ನೇ ಸಾಲಿನಿಂದ 2009-10ನೇ ಸಾಲಿನವರೆಗೆ ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನದ ವಿವರ

ಕ್ರ.ಸಂ	ಜಿಲ್ಲೆ	ವಿಧಾನ ಸಭಾ ಕ್ಷೇತ್ರ	2007-08		2008-09		2009-10		ಒಟ್ಟು	
			ಅನುದಾನ	ವೆಚ್ಚ	ಅನುದಾನ	ವೆಚ್ಚ	ಅನುದಾನ	ವೆಚ್ಚ	ಅನುದಾನ	ವೆಚ್ಚ
1	ದಕ್ಷಿಣ ಕನ್ನಡ	ಮಂಗಳೂರು(ಉ)	63.60	75.76	131.40	101.75	22.00	39.65	217.00	217.16
2	ದಕ್ಷಿಣ ಕನ್ನಡ	ಮಂಗಳೂರು(ದ)	124.50	58.62	90.00	176.28		21.03	214.50	255.93
3	ದಕ್ಷಿಣ ಕನ್ನಡ	ಮಂಗಳೂರು	35.53	38.64	45.90	4.71	8.00	17.15	89.43	60.50
4	ದಕ್ಷಿಣ ಕನ್ನಡ	ಮೂಲ್ಕಿ-ಮೂಡಬಿದ್ರೆ	70.23	321.63	16.50	170.37	8.00	30.54	94.73	522.54
5	ದಕ್ಷಿಣ ಕನ್ನಡ	ಬಂಟ್ವಾಳ	95.70	121.35	74.50	181.40	28.00	42.62	198.20	345.37
6	ದಕ್ಷಿಣ ಕನ್ನಡ	ಬೆಳ್ತಂಗಡಿ	105.00	132.27	106.80	94.37	114.85	71.91	326.65	298.55
7	ದಕ್ಷಿಣ ಕನ್ನಡ	ಪುತ್ತೂರು	112.20	224.27	71.40	191.58	17.00	19.72	200.60	435.57
8	ದಕ್ಷಿಣ ಕನ್ನಡ	ಸೂಳ್ಯ	53.70	288.95	136.30	168.21	28.00	5.13	218.00	462.29
	ಒಟ್ಟು		660.46	1261.49	672.80	1088.67	225.85	247.75	1559.11	2597.91